ಅದಕ್ಕಿಂತ ಮುಖ್ಯವಾಗಿ ಕಳೆದ ಹದಿನಾಲ್ಕು ವರ್ಷಗಳಿಂದ ಆಕೆಗೆ ಮನೆಯಿಂದ ಹೊರಬರಲೇ ಸಾಧ್ಯವಾಗುತ್ತಿರಲಿಲ್ಲ. ಏನೋ ಕೆಲಸದಲ್ಲಿದ್ದಾಗ ಮೇಲಿಂದ ಬಿದ್ದು ಸೊಂಟ ಮುರಿದುಕೊಂಡು ಹಾಸಿಗೆಗೆ ಆಕೆಯ ಬದುಕು ಸೀಮಿತವಾಗಿತ್ತು. ಆದರೆ ರಮಾನಾಥರದು ಅಪ್ಪಟ ಮಾತೃಹೃದಯ. ತನ್ನ ಪತ್ನಿಗೆ ದೈನಂದಿನ ಕಾರ್ಯ ಚಟುವಟಿಕೆಗಳನ್ನು ಮಾಡಲಾಗುತ್ತಿಲ್ಲ ಎಂದು ಅವರು ಅಸಮಾಧಾನ ಪಟ್ಟುಕೊಂಡವರಲ್ಲ. ಆಕೆಯನ್ನು ಮಗುವಿನಂತೆ ಆರೈಕೆ ಮಾಡಿದರು. ಆಕೆಯಲ್ಲಿ ಸದಾ ಉತ್ಸಾಹ ತುಂಬುತ್ತಿದ್ದರು. ಶೂಟಿಂಗ್ ಇಲ್ಲದೇ ಇರುವಾಗ ಸ್ವತಃ ಅಡುಗೆ ಮಾಡಿ ತಿನ್ನಿಸುತ್ತಿದ್ದರು. ಆಕೆಯೊಂದಿಗೆ ಕುಳಿತು ಟೀವಿ ಧಾರಾವಾಹಿಗಳನ್ನು ವೀಕ್ಷಿಸುತ್ತಿದ್ದರು. ಸಾಹಿತ್ಯ ಓದಿ ಅದರ ಕಥೆಗಳನ್ನು ಆಕೆಗೆ ಹೇಳುತ್ತಾ ಆಕೆಯನ್ನು ಸಕ್ರಿಯರಾಗಿ ಇರಿಸುತ್ತಿದ್ದರು.

ಆಕೆ ನಕ್ಕಾಗ, ನಕ್ಕು ಅಳುವಾಗ ಧೈರ್ಯ ತುಂಬುತ್ತಿದ್ದರು. ಅವರು ತಮ್ಮ ಪತ್ನಿಗೆ ಹೀಗಾಗಿದೆ ಎಂದು ನೊಂದುಕೊಳ್ಳಲಿಲ್ಲ. ಬೇರೆ ಹೆಣ್ಣಿನೊಂದಿಗೆ ಸಂಬಂಧ ಬೆಳೆಸಲಿಲ್ಲ. ತನ್ನ ಪತ್ನಿಗೆ ಜವಾಬ್ದಾರಿಯುತ ಪತಿಯಂತೆ ಇದ್ದರು.

ಇಂತಿಪ್ಪ ರಮಾನಾಥ ಅವರಲ್ಲಿ ಸಹಾಯಕನಾಗಿದ್ದು ನನ್ನ ಎತ್ತರ ಹಾಗೂ ನನ್ನ ಮಿತಿ ಎಂದು ಯಾವಾಗಲೂ ಅಂದುಕೊಳ್ಳುತ್ತಿದ್ದೆ. ಪದವಿ ಓದುತ್ತಿರುವಾಗಲೇ ನನಗೆ ಸಿಕ್ಕಾಪಟ್ಟೆ ಸಿನಿಮಾಹುಚ್ಚು. ಆಂಧ್ರ ಗಡಿಯ ಪುಟ್ಟ ಗ್ರಾಮದಲ್ಲಿ ಹುಟ್ಟಿದ ಚಿರಂಜೀವಿ ಸಿನಿಮಾಗಳಿಗೆ ಡ್ಯಾನ್ಸ್ ಮಾಡುತ್ತಿದ್ದ ನನ್ನನ್ನು ಎಲ್ಲರೂ ಚಿರಂಜೀವಿ ಎನ್ನುತ್ತಿದ್ದರು. ಅದೇ ಆತ್ಮವಿಶ್ವಾಸದಿಂದ ಹೈದರಾಬಾದಿಗೆ ಓಡಿಬಂದಿದ್ದೆ. ನಾನು ಮುಂದೊಬ್ಬ ಸೂಪರ್‌ಸ್ಟಾರ್ ಆಗಿಯೇಬಿಡುತ್ತೇನೆ ಎಂಬ ಭರವಸೆ ಹುಸಿಯಾಗಲು ನನ್ನಲ್ಲಿದ್ದ ಖರ್ಚಿನ ಹಣ ಖಾಲಿಯಾಗುವಷ್ಟೂ ಸಮಯ ಬೇಕಾಗಲಿಲ್ಲ.

ಯಾವ ಸಿನಿಮಾ ಸೆಟ್‌ಗೆ ಹೋದರೂ ನನ್ನಂಥ ನಟರಾಗುವ ಆಕಾಂಕ್ಷಿಗಳು ಸಾವಿರಾರು ಮಂದಿ ಇರುತ್ತಿದ್ದರು. ಸಿನಿಮಾ ನಿರ್ದೇಶಕರನ್ನು ಕಂಡು ಅವಕಾಶಗಳಿಗಾಗಿ ಗೋಗರೆಯುತ್ತಿದ್ದರು. ಸಿನಿಮಾ ಕಚೇರಿಗಳ ವಾಚ್‌ಮನ್‌ಗಳ ಪರಿಚಯ ಮಾಡಿಕೊಂಡು ಹೇಗಾದರೂ ಆಫೀಸಿನಲ್ಲಿ ನಡೆಯುವ ಆಡಿಷನ್‌ಗಳಲ್ಲಿ ನಿರ್ಮಾಪಕ, ನಿರ್ದೇಶಕರ ಕಣ್ಣಿಗೆ ಬೀಳಬೇಕೆಂದು ಶ್ರಮಿಸುತ್ತಿದ್ದರು. ಆದರೆ ಬೃಹತ್ತಾದ ಸಿನಿಮಾ ರಂಗದಲ್ಲಿ ಒಬ್ಬ ಜೂನಿಯರ್ ನಟನಾಗಲೂ ನಾನು ಲಾಯಕ್ಕಾಗಿಲ್ಲ ಎಂದು ಕೆಲವೇ ದಿನಗಳಿಗೆ ಅರಿವಾಯಿತು. ಆಗ ಸೆಟ್ ಸುತ್ತಿ ಪರಿಚಯವಾದ ಪ್ರತಿಯೊಬ್ಬರಿಂದಲೂ ಏನಾದರೂ ಕೆಲಸ ಕೊಡಿಸಿ ಎಂದು ಬೆನ್ನು ಹತ್ತಿ ಮೇಕಪ್ ಅಸಿಸ್ಟೆಂಟ್ ಆಗಿ ಸೇರಿಕೊಂಡೆ. ಅಲ್ಲಿಂದ ನನ್ನ ಸಿನಿಮಾ ಜೀವನ ಪ್ರಾರಂಭವಾಯಿತು. ಪ್ರತಿನಿತ್ಯ ಕೆಲಸ ಇಲ್ಲದೇ ಇದ್ದರೂ ಏನೋ ಒಂದು ಕೆಲಸ ಮಾಡುತ್ತಿದ್ದಂತೆ, ಸೆಟ್‌ನಲ್ಲಿ ಚಲನಚಿತ್ರ ನಟರ ಹತ್ತಿರದಲ್ಲಿ ಒಡನಾಡಲು ಅವಕಾಶ ಕಲ್ಪಿಸಿತು. ಆದರೆ ದಿನವೂ ಕೆಲಸ ಇಲ್ಲದೇ ಇರುವುದರಿಂದ ತುತ್ತಿನ ಚೀಲ ತುಂಬುವುದು ಕಷ್ಟವಾಗಿತ್ತು. ಆಗ ನನ್ನ ದೂರದ ಸಂಬಂಧಿಯೂ ಆಗಿದ್ದ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದ ಸೀನಣ್ಣ ನನ್ನನ್ನು ರಮಾನಾಥರ ಅಸಿಸ್ಟೆಂಟ್ ಆಗಿ ಸೇರಿಸಿದ. ಬಹುದೊಡ್ಡ ನಟನಾಗಬೇಕೆಂಬ ಮಹತ್ವಾಕಾಂಕ್ಷೆ ಇದ್ದರೂ ತಿಂಗಳ ಸಂಬಳ ದೊರೆಯುತ್ತದೆ ಎಂದು ಅವರಲ್ಲಿಯೇ ಮುಂದುವರೆದಿದ್ದೆ. ಕಷ್ಟ ಎಂದರೆ ಬೇಕೆಂದಾಗ ಹಣ ನೀಡಲು ಅವರು ಹಿಂಜರಿಯುತ್ತಿರಲಿಲ್ಲ. ಅವರು ನನ್ನ ವ್ಯಕ್ತಿತ್ವದ ಮೇಲೆ ಅಪಾರ ಪ್ರಭಾವ ಬೀರಿದರು. ರಾಗದ್ವೇಷ, ಸಣ್ಣ ಪುಟ್ಟ ವಿಷಯಗಳಿಗೆ ಸಿಡುಕುವ ಮನೋಭಾವ ಹೊಂದಿದ ನಾನು ಅವರನ್ನು ನೋಡಿದ ಕೂಡಲೇ ಅವರಂತೆ ಇರಬೇಕೆಂದು ಪ್ರಯತ್ನಿಸಿ ವಿಫಲನಾಗುತ್ತಿದ್ದೆ. ಕೆಲವೊಮ್ಮೆ ನನ್ನ ವಿಪರೀತ ವರ್ತನೆ ಅವರ ಮೇಲೆ ತೋರಿದರೂ ನಕ್ಕುಬಿಡುತ್ತಿದ್ದರು. ಆಗ ನನಗೆ ಬಹಳ ನಾಚಿಕೆಯಾಗುತ್ತಿತ್ತು.

★★★